# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 542 / 2017

ಸಿಡಬ್ಲ್ಯೂ- 1
ಪಿಡಬ್ಲ್ಯೂ- 1

ದಿನಾಂಕಃ **17.07.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಮಲ್ಲಿಕಾರ್ಜುನ |
| ತಂದೆಯ/ಗಂಡನ ಹೆಸರುಃ | - | ಮಲ್ಲಣಗೌಡ ಪೊಲೀಸ್ ಪಾಟೀಲ್ |
| ವಯಸ್ಸುಃ | -? | 42 ವರ್ಷ |
| ಉದ್ಯೋಗಃ | - | ವಕೀಲರು. |
| ವಾಸಸ್ಥಳಃ | - | ರಾಯಚೂರು. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಚಾಸಾ-4 ರವರ ನನ್ನ ಹೆಂಡತಿ ಇರುತ್ತಾರೆ. 2017 ನೇ ಇಸಿಯಲ್ಲಿ ಯಾದಗಿರಿ ನಗರದ ಹೊಸಳ್ಳಿ ಕ್ರಾಸ್ ಹತ್ತಿರ ಇರುವ ನಜರತ್ ಕಾಲೋನಿಯಲ್ಲಿ ವಾಸವಾಗಿದ್ದೆ. ದಿನಾಂಕಃ 20.07.2017 ರಂದು ನಾನು ಹಾಗೂ ನನ್ನ ಕುಟುಂಬದವರು ಕೂಡಿ ಸಂಜೆ ಬೆಂಗಳೂರಿಗೆ ಯಾದಗಿರಿಯಿಂದ ಹೋಗಿದ್ದೇವು. ಆವಾಗ ನಮ್ಮ ಮನೆಯಲ್ಲಿ ಯಾರು ಇರಲಿಲ್ಲ ನಮ್ಮ ಮನಗೆ ಬೀಗ ಹಾಕಿ ಬೆಂಗಳೂರಿಗೆ ಹೋಗಿದ್ದೇವು. ದಿನಾಂಕಃ 23.07.2017 ರಂದು ಸಂಜೆ 6 ಗಂಟೆಗೆ ನಾವು ಬೆಂಗಳೂರಿನಿಂದ ಮನೆಗೆ ಬಂದಿದ್ದೆ ಆವಾಗ ಮನೆಯ ಬೀಗ ತೆರೆದಿತ್ತು. ನಂತರ ನಾವು ಮನೆಯ ಒಳಗಡೆ ಹೋಗಿ ನೋಡಿದ್ದಾಗ ನಮ್ಮ ಮಲಗುವ ಕೊಣೆಯಲ್ಲಿ ಇದ್ದ ಅಲಮರ ತೆರೆದಿತ್ತು. ಅದರಲ್ಲಿ 4 ಗ್ರಾಂ ಬಂಗಾರದ ತಾಳಿ ಇತ್ತು ಮತ್ತು 4 ಗ್ರಾಂ ಜುಮ್ಕಿ ಇತ್ತು. 2 ಗ್ರಾಂ ಉಂಗುರ ಸಹ ಅದರಲ್ಲಿ ಇತ್ತು. ಅದೇ ರೀತಿ ನನ್ನ ಎನ್.ಸಿ.ಸಿ ಯ ಮೂರು ಪದಕಗಳು ಇದ್ದವು. ಇವುಗಳೆಲ್ಲವು ಕಳ್ಳತನ ಆಗಿದ್ದವು. ನನ್ನ ಗೆಳೆಯನಾದ ಚಾಸಾ-5 ರವರಿಗೆ ಪೋನ್ ಕರೆ ಮಾಡಿ ಕಳ್ಳತನ ಆದ ವಿಷಯವನ್ನು ತಿಳಿಸಿದ್ದೆ ಅವರು ಸಹ ನನ್ನ ಮನೆಗೆ ಬಂದಿದ್ದರು. ದಿನಾಂಕಃ 25.07.2017 ರಂದು ನಾನು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ದೂರನ್ನು ನೀಡಿದ ನಂತರ ದಿನಾಂಕಃ 26.07.2017 ರಂದು ಪೊಲೀಸರು ಪಂಚನಾಮೆ ಮಾಡಲು ನನ್ನ ಮನೆಗೆ ಬಂದಿದ್ದರು. ಆವಾಗ ಸಾಕ್ಷಿದಾರರಾದ ಚಾಸಾ-2 ಮತ್ತು

3 ರವರು ಸಹ ಹಾಜರಿದ್ದರು. ನನ್ನ ಮನೆಯಲ್ಲಿ ಕಳ್ಳತನ ಆದ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿದ್ದೆ. ನಂತರ ಪೊಲೀಸರು ಸ್ಥಳಪಂಚನಾಮೆಯನ್ನು ಮಾಡಿ ಪೋಟೋವನ್ನು ತೆಗೆದಿದ್ದರು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ದಿನಾಂಕಃ 26.07.2017 ರಂದು ಮದ್ಯಾಹ್ನ 12 - 12-30 ಗಂಟೆಗೆ ಪೊಲೀಸರು ನನಗೆ ಪೋನ್ ಕರೆ ಮಾಡಿ ಕರೆಸಿದ್ದರು ಆವಾಗ ನಾನು, ನನ್ನ ಹೆಂಡತಿ ಮತ್ತು ಚಾಸಾ-5 ರವರು ಕೂಡಿ ಪೊಲೀಸ್ ಠಾಣೆಗೆ ಹೋಗಿದ್ದೇವು. ಅಲ್ಲಿ ನನ್ನ ಮನೆಯಲ್ಲಿ ಕಳ್ಳತನ ಆದ ಆಭರಣಗಳನ್ನು ಹಾಗೂ ನನ್ನ ಎನ್.ಸಿ.ಸಿ. ಪದಕಗಳನ್ನು ಪೊಲೀಸರು ನನಗೆ ತೋರಿಸಿದ್ದರು. ಸದರಿ ಬಂಗಾರ ಮತ್ತು ಎನ್.ಸಿ.ಸಿ ಪದಕ ಇವುಗಳನ್ನು ಪೊಲೀಸ್ ಠಾಣೆಯಲ್ಲಿ ನೋಡಿ ನಾನು ಗುರುತಿಸಿದ್ದೆ. ಪೊಲೀಸರಿಗೆ ನನ್ನ ಮನೆಯನ್ನು ಕಳ್ಳತನ ಯಾರು ಮಾಡಿರುತ್ತಾರೆ ಎಂದು ಅವರನ್ನು ನಾನು ವಿಚಾರಿಸಿದ್ದೇ ಆವಾಗ ಅವರು ಆರೊಪಿತಳನ್ನು ತೋರಿಸಿದ್ದರು ಆರೋಪಿತಳ ಹೆಸರು ಜಯಶ್ರೀ ಇರುತ್ತದೆ. ಆರೋಪಿತಳು ನನ್ನ ಮನೆಯನ್ನು ಮದ್ಯಾಹ್ನ ಕಳ್ಳತನ ಮಾಡಿರುತ್ತಾಳೆ ಎಂದು ಪೊಲೀಸರು ನನಗೆ ತಿಳಿಸಿದ್ದರು. ನಾನು ಪೊಲೀಸ್ ಠಾಣೆಯಲ್ಲಿ ಮುಚ್ಚಳಿಕೆ ಬರೆದುಕೊಂಡು ನನ್ನ ಬಂಗಾರದ ಆಭರಣಗಳನ್ನು ಮತ್ತು ಎನ್.ಸಿ.ಸಿ ಪದಕನ್ನು ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ತಾನು ಬರೆದುಕೊಟ್ಟ ಮುಚ್ಚಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಆ ದಿನ ಪೊಲೀಸ್ ಠಾಣೆಯಲ್ಲಿ ತೋರಿಸಿದ ಆರೋಪಿತಳು ಈಗ ನ್ಯಾಯಾಲಯದ ಮುಂದೆ ಹಾಜರು ಇರುತ್ತಾರೆ. ಅವರೇ ಆ ದಿನ ತೋರಿಸಿದ ಆರೋಪಿ ಇರುತ್ತಾಳೆ. ಬಂಗಾರದ ಆಭರಣಗಳನ್ನು ಮತ್ತು ಎನ್.ಸಿ.ಸಿ ಪದಕಗಳನ್ನು ಗುರುತು ಹಿಡಿಯಲು ಆರೋಪಿ ಪರ ವಕೀಲರು ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಸಿ.ಎಂ. ರವರಿಂದಃ

ನನ್ನ ಮನೆಯಲ್ಲಿ ಇರುವ ಬಂಗಾರದ ಆಭರಣಗಳನ್ನು ಮತ್ತು ಎನ್.ಸಿ.ಸಿ ಪದಕಗಳನ್ನು ಯಾರು ಕಳುವು ಮಾಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಅವುಗಳನ್ನು ಆರೋಪಿತಳು ಕಳ್ಳತನ ಮಾಡಿರುತ್ತಾಳೆ ಎಂದು ಪೊಲೀಸರು ನನಗೆ ಹೇಳಿದ್ದರು. ಪೊಲೀಸರು ಹೇಳಿದ ಮೇರೆಗೆ ನನಗೆ ಗೊತ್ತಾಯಿತು ಎಂದರೆ ಸರಿ. ದಿನಾಂಕಃ 20.07.2017 ರಂದು ನಾನು ಬೆಂಗಳೂರಿಗೆ ರೈಲಿನ ಮೂಲಕ ಹೋಗಿದ್ದೆ. ನಾನು ಬರುವಾಗ ಬೆಂಗಳೂರಿನಿಂದ ಬಸ್ಸಿ ನ ಮೂಲಕ ರಾಯಚೂರಿಗೆ ಬಂದಿದ್ದೆ. ನಂತರ ನಾನು ರಾಯಚೂರಿನಿಂದ ಯಾದಗಿರಿಗೆ ಬಸ್ಸಿನ ಮೂಲಕ ಬಂದಿದ್ದೆ. ನಾನು ದೂರನ್ನು ನೀಡಿದ್ದಾಗ ರಾತ್ರಿ 8 ಗಂಟೆ ಆಗಿತ್ತು. ದೂರನ್ನು ನೀಡಲು ನಾನು ಹೋಗಿದ್ದೆ. ನಾವು

ವಾಸಿಸುತ್ತಿದ್ದ ಮನೆಯು ಮೂರು ಕೊಣೆಯ ಮನೆ ಇತ್ತು. ನಾನು ದೂರನ್ನು ನೀಡಿದ ಮರುದಿವಾಸ ಬೆಳಗ್ಗೆ 10 ಗಂಟೆಗೆ ಪೊಲೀಸರು ಪಂಚನಾಮೆ ಮಾಡಲು ಬಂದಿದ್ದರು. ಒಂದು ವರೇ ಅವಧಿಯ ಒಳಗಡೆ ಪೊಲೀಸರು ಪಂಚನಾಮೆಯನ್ನು ಮಾಡಿದ್ದರು. ಪಂಚನಾಮೆಯಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಪೊಲೀಸರು ಬರೆದಿದ್ದರು. ಚಾಸಾ-2 ಮತ್ತು 3 ರವರನ್ನು ಪೊಲೀಸರು ಕರೆದುಕೊಂಡು ಬಂದಿದ್ದರು. ದಿನಾಂಕಃ 26.07.2017 ರಂದು ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. 4 ಗ್ರಾಂ ಬಂಗಾರದ ತಾಳಿ ಇತ್ತು ಮತ್ತು 4 ಗ್ರಾಂ ಜುಮ್ಕಿಕಿ ಇತ್ತು. 2 ಗ್ರಾಂ ಉಂಗುರ ಇವುಗಳು ಬಂಗಾರದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ನನ್ನ ಮನೆಯಿಂದ 4 ಗ್ರಾಂ ಬಂಗಾರದ ತಾಳಿ ಇತ್ತು ಮತ್ತು 4 ಗ್ರಾಂ ಜುಮ್ಕಿಕಿ ಇತ್ತು. 2 ಗ್ರಾಂ ಉಂಗುರ ಸಹ ಅದರಲ್ಲಿ ಇತ್ತು. ಅದೇ ರೀತಿ ನನ್ನ ಎನ್.ಸಿ.ಸಿ ಯ ಮೂರು ಪದಕಗಳು ಕಳುವು ಆಗಿರುತ್ತವೆ ಎಂದು ನಾನು ಸುಳ್ಳು ದೂರನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಎನ್.ಸಿ.ಸಿ ಪದಕಗಳ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ಅವುಗಳ ಕುರಿತು ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ ದಿನಾಂಕಃ 26.07.2017 ರಂದು ಮದ್ಯಾಹ್ನ 12 ರಿಂದ 12-30 ಗಂಟೆಗೆ ಪೊಲೀಸರು ನನಗೆ ಫೋನ್ ಕರೆ ಮಾಡಿ ಪೊಲೀಸ್ ಠಾಣೆಗೆ ಬರಲು ತಿಳಿಸಿದ್ದರು ಎಂದು ನಾನು ಸುಳುಳ ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಿನದಂದು ಪೊಲೀಸ್ ಠಾಣೆಯಲ್ಲಿ ಪೊಲೀಸರು ಆಭರಣಗಳನ್ನು ಮತ್ತು ಎನ್.ಸಿ.ಸಿ ಪದಕವನ್ನು ಹಾಗೂ ಆರೋಪಿತಳನ್ನು ತೋರಿಸಿದ್ದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಇದೇ ಮೊದಲು ಬಾರಿಗೆ ನಾನು ಆರೋಪಿತಳನ್ನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತಳಿಗೂ ಹಾಗೂ ಮುದ್ದೆ ಮಾಲುಗಳಿಗೂ ಯಾವುದೇ ರೀತಿಯ ಸಂಬಂದವನ್ನು ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿ ಸುಳ್ಳು ದೂರನ್ನು ನೀಡಿ ನಾನು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.